ಮೂಲ ದಾವಾ ಸಂಖ್ಯೆ. 211/2016 ಡಿ ಡಬ್ಲ್ಯೂ 3

(ದಿನಾಂಕ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಬಿ ಆರ್ ವಕೀಲರಿಂದಃ-

ಪ್ರತಿವಾದಿ ನನಗೆ ಕುಲಸ್ಥರು ಹಾಗೂ ಸಣ್ಣಮ್ಮನಾಗಬೇಕು. ಪ್ರತಿವಾದಿಯು ಸಾಕ್ಷಿ ಹೇಳಲು ನನಗೆ ಕರೆದಿದ್ದರಿಂದ ನಾನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆಂದರೆ ಸರಿ. ದಾವಾಸ್ತಿ ಕುರಿತು ಬಿ ಡಿ ಓ ರವರು ದಿಃ 13-05-1981 ರಂದು ನಡಾವಳಿ ಮೂಲಕ ಮಂಜೂರು ಮಾಡಿರುತ್ತಾರೆ ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ನಂತರ ಸದರಿ ಆಸ್ತಿಯು ಹನಸಿ ಮಂಡಲ ಪಂಚಾಯ್ತಿಯಲ್ಲಿ ವಾರ್ಡ ನಂ.2 ಡೋರ್ ನಂ.13 ಅಂತಾ ದಾಖಲಾಗಿದೆ ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ಡೋರ್ ನಂ.13 ರ ಚಕ್ಕುಬಂದಿ ಪೂಃ ಕೂಡ್ಲಗಿ ಹೆಚ್ ಬಿ ಹಳ್ಳಿ ರಸ್ತೆ ಇದೆ ಎಂದರೆ ಸರಿ, ಪಃ ಖಾಲಿ ಜಾಗ ಇದೆ ಎಂದರೆ ಸರಿ. ಉಃ ಸಣ್ಣಈರಪ್ಪ ಇವರ ಮನೆ ಇದೆ ಎಂದರೆ ಸಾಕ್ಷಿಯು ಪ್ರತಿವಾದಿಯ ಆಸ್ತಿಇದೆ ಎನ್ನುತ್ತಾರೆ ಹಾಗೂ ದಃ ಉಪ್ಪಾರಗಟ್ಟಿ ಈರಣ್ಣ ಇವರ ಆಸ್ತಿ ಇದೆ ಎಂದರೆ ಸರಿ.

ಹೋಟೇಲ್ ಚನ್ನಮ್ಮ ಅಜ್ಜಿಯನ್ನು ನಾನು ನೋಡಿದ್ದೇನೆ. ಸದರಿಯವರು ತನ್ನ ಮಗಳ ಮನೆಯಲ್ಲಿ ಸುಮಾರು 5-6 ವರ್ಷ ಇದ್ದರು. ಈ ದಾವೆಯನ್ನು ಯಾರು ಯಾರ ವಿರುದ್ದ ಯಾವ ವಿಚಾರಕ್ಕೆ ದಾಖಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನೇ ಬರೆಸಿರುತ್ತೇನೆ. ಅದರಲ್ಲಿರುವ ವಿಚಾರಗಳು ನಾನು ಅಲ್ಪಸ್ವಲ್ಪ ಹೇಳಬಹುದು. ದಾವಾಸ್ತಿಯಲ್ಲಿ ಈಗಲೂ ಸಹಾ ವಾದಿಯು ವಾಸವಾಗಿರುತ್ತಾನೆಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿರುವ ಆಸ್ತಿ ನಂ.2/120 ಇದು ಕಾಲ್ಪನಿಕವಾಗಿರುತ್ತದೆ ಆ ರೀತಿ ಯಾವುದೇ ಆಸ್ತಿ ಅಸ್ತಿತ್ವದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ನನ್ನ ಚಿಕ್ಕಮ್ಮ ಕೆಲ ಪ್ರಭಾವಿ ವ್ಯಕ್ತಿಗಳ ಸಹಾಯದೊಂದಿಗೆ ಪಂಚಾಯ್ತಿ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ವಾದಿಯು ವಯಸ್ಸಾದವನು, ಅನಕ್ಷರಸ್ಥ ಮತ್ತು ಮುಗ್ದ ಸ್ವಭಾವದವನು ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಾನು ಮತ್ತು ಪ್ರತಿವಾದಿಯು ವಾದಿಯ ದಾವಾಸ್ತಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟು ಅವನನ್ನು ಆಸ್ತಿಯಿಂದ ಹೊರಹಾಕುವ ಪ್ರಯತ್ನ ನಡೆಸಿರುತ್ತೇವೆಂದರೆ ಸುಳ್ಳು.

ನನ್ನ ಮೂಲ ಊರು ಉಪ್ಪಾರಗಟ್ಟಿ ಗ್ರಾಮ ಮದುವೆಯಾದ ನಂತರದಿಂದ ನಾನು ಹೊಸಕೇರಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು ಮತ್ತು ಪ್ರತಿವಾದಿ ಹಾಗೂ ಪ್ರಭಾವಿ ವ್ಯಕ್ತಿಗಳ

ಮೂಲ ದಾವಾ ಸಂಖ್ಯೆ. 211/2016 ಡಿ ಡಬ್ಲ್ಯೂ 3

ಸಹಾಯದೊಂದಿಗೆ ದಿಃ 02-08-2016 ರಂದು ದಾವಾಸ್ತಿಯ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತೇವೆ ಅವನ ಸ್ವಾಧೀನ ತಪ್ಪಿಸಲು ಪ್ರಯತ್ನಪಟ್ಟಿರುತ್ತೇವೆ ಅದನ್ನು ವಾದಿಯು ತಡೆದಿರುತ್ತಾನೆಂದರೆ ಸರಿಯಲ್ಲ. ನಾನು ಸಾಕ್ಷಿ ಹೇಳಲು ಬಂದಿರುವ ವಾರ್ಡ ನಂ.2 ಪ್ಲಾಟ್ ನಂ.120 ಇರುತ್ತದೆ. ಡೋರ್ ನಂಬರ್ ಸಹಾ 120 ಇರುತ್ತದೆ. ನಾನು ವಾಸ ಮಾಡುವ ಮನೆಯ ಪ್ಲಾಟ್ ನಂಬರ್ ಮತ್ತು ಡೋರ್ ನಂ. 119 ಇರುತ್ತದೆ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಆದರೂ ಸಹಾ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ